# ಬೇಸಿಗೆ ಬೇಗೆಗೆ ಓದೇ ಬೆಳುದಿಂಗಳು

ಈ ಬೇಸಿಗೆ ರಜೆಯಲ್ಲಿ ಮಕ್ಕಳು ಏನೇನು ಓದಬಹುದು? ಮಕ್ಕಳ ಸಾಹಿತ್ಯ ಬಲ್ಲವರ ಶಿಫಾರಸು ಪುಸ್ತಕ ಪಟ್ಟಿ ಇಲ್ಲಿದೆ. ಈ ಪುಸ್ತಕಗಳೂ ಸೇರಿದಂತೆ ನಿಮ್ಮ ಮೆಚ್ಚಿನ ಮಕ್ಕಳ ಸಾಹಿತ್ಯವನ್ನು ಎಳೆಯರ ಕೈಗೆ ಕೊಟ್ಟರೆ, ಮನರಂಜನೆಯೊಂದಿಗೆ ಮನೋವಿಕಾಸ ಸಾಧ್ಯವಾಗುವುದರ ಜೊತೆಗೆ, ಮೊಬೈಲ್‌ಗೆ ರೆಸ್ಟೂ ಸಿಗುತ್ತದೆ!

■ ನಿರ್ವಹಣೆ: **ರಾಘವೇಂದ್ರ ಕೆ. ತೊಗರ್ಸಿ**

## ಕುಂಭಕರ್ಣನ ನಿದ್ದೆ




ಎಲ್ಲ ಪುಸ್ತಕಗಳೂ ಎಲ್ಲರಿಗೂ ಇಷ್ಟವಾಗುವುದಿಲ್ಲ. ಮಕ್ಕಳಿರಲಿ, ದೊಡ್ಡವರಿರಲಿ ಅವರವರಿಗೆ ಅವರವರದ್ದೇ ಆಯ್ಕೆ ಇದೆ. ಬೇಸಿಗೆ ರಜೆಯಲ್ಲಿ ನಾನು ಮಕ್ಕಳ ಓದಿಗೆ ಶಿಫಾರಸು ಮಾಡುವ ನನ್ನ ಇಷ್ಟದ ಪುಸ್ತಕ ನವಕರ್ನಾಟಕ ಪ್ರಕಾಶನದ ಎನ್. ಶ್ರೀನಿವಾಸ ಉಡುಪ ಅವರ ಮಕ್ಕಳ ಪದ್ಯಗಳ ಸಂಕಲನ 'ಕುಂಭಕರ್ಣನ ನಿದ್ದೆ'. ಇಡೀ ವರ್ಷ ಅನಿವಾರ್ಯವಾದ ಪಠ್ಯದ ಓದಿನಿಂದ ಬೇಸರಗೊಂಡ, ಹಿಂಸೆಗೊಂಡ ಮಕ್ಕಳ ಮನೋರಂಜನೆಗೆ ತಕ್ಕುದಾದ ಪುಸ್ತಕ ಇದು. ಮಕ್ಕಳಿಗೆ ಅತ್ಯಂತ ಪ್ರಿಯವಾದ ವಿಷಯಗಳೇ ಇಲ್ಲಿಯ ಪದ್ಯಗಳ ವಸ್ತುಗಳಾಗಿವೆ. ಮಕ್ಕಳು ಓದುವಾಗ ಅವರನ್ನು ಹಿಡಿದಿಟ್ಟುಕೊಳ್ಳುವ ಮತ್ತು ಅವರ ಮನಸ್ಸಿಗೆ ಮುದವಾಗಿ ಕಚಗುಳಿ ಇಡುವ ನವಿರಾದ ಪದ್ಯಗಳೇ ಇಲ್ಲಿವೆ. ಇಲ್ಲಿಯ 'ಕುಂಭಕರ್ಣನ ನಿದ್ದೆ' ಅಂತೂ ಒಂದು ಅದ್ಭುತ ರಚನೆ. ಇಂಥ ಸುಂದರ ಪದ್ಯಗಳು ನಮ್ಮ ಮುದ್ದಾದ ಮಕ್ಕಳ ಕಣ್ಣಿಗೆ ಬೀಳಲಿ, ಅವರ ಮನತಟ್ಟಲಿ ಮತ್ತು ಅವರ ಓದಿನ ಆನಂದ ಹೆಚ್ಚಿಸಲಿ ಎಂಬ ಆಶಯ ನನ್ನದು.

—ರಾಜಶೇಖರ ಕುಕ್ಕುಂದಾ

## ಪಂಚತಂತ್ರವೂ ಚಂದಮಾಮನೂ

ಮಕ್ಕಳಿಗೆ ಪುಸ್ತಕ ಅಂದ ತಕ್ಷಣ ನೆನಪಿಗೆ ಬರುವುದು 'ಪಂಚತಂತ್ರ', 'ಚಂದಮಾಮ', 'ಬಾಲಮಿತ್ರ'ದ ಕಥೆಗಳು. 'ತೆನಾಲಿರಾಮ'ನ ಕಥೆಗಳು ಆಗಬಹುದು. ಈ ಕಥೆಗಳನ್ನು ಓದಿದರೆ ಭಾಷೆಯ ಬಗ್ಗೆ ಅವರಲ್ಲಿ ಪ್ರೀತಿ ಹುಟ್ಟುತ್ತದೆ. ಇಂಗ್ಲಿಷ್‌ಗೆ ಹೋಲಿಸಿದರೆ ಈಗ ಕನ್ನಡದಲ್ಲಿ ಓದಿನ ಪ್ರಮಾಣ ಕಡಿಮೆ ಆಗಿದೆ. ಮೊಬೈಲ್‌ನಲ್ಲಿಯೂ ಹಳೆಯ ಕಥೆಗಳನ್ನು ನೋಡುವ ಅಥವಾ ಓದುವ ಅವಕಾಶ ಉಂಟು.

—ರಮೇಶ್ ಶೆಟ್ಟಿಗಾರ್







## ಸಿಸು ಸಂಗಮೇಶರ ಪದ್ಯಗಳು

ಸಿಸು ಸಂಗಮೇಶ ಮಕ್ಕಳ ಸಾಹಿತ್ಯದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಅವರ ಕವನ ಸಂಕಲನಗಳು ಮಕ್ಕಳ ಓದಿಗೆ ಸೂಕ್ತ. ಅವರ ಕಾವ್ಯದಲ್ಲಿ ಭಕ್ತಿ ಮತ್ತು ದೇಶಪ್ರೇಮ ಪ್ರಧಾನವಾಗಿ ಇರುತ್ತದೆ. ಮಕ್ಕಳ ಮಾನಸಿಕ ಬೆಳವಣಿಗೆ ಜೊತೆಗೆ, ಆ ವಯೋಮಾನದಲ್ಲಿ ಅಗತ್ಯ ಇರುವ ಸಂಸ್ಕಾರ ಇದರಿಂದ ಸಿಗಬಹುದು. ವಿಜಯಪುರ ಜಿಲ್ಲೆಯ ಅವರು ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಸೃಜನಶೀಲ ಸಾಹಿತ್ಯ ಮಾತ್ರವಲ್ಲದೆ ಅನುವಾದ, ಸಂಪಾದನೆಯಲ್ಲೂ ಹೆಸರು ಮಾಡಿದ್ದಾರೆ. ಮಕ್ಕಳು ಓದಬಹುದಾದ ಅವರ ಸಾಹಿತ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು 'ಸಿಸು ಸಂಗಮೇಶ ಆಯ್ದ ಮಕ್ಕಳ ಸಾಹಿತ್ಯ' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದೆ.

—ಡಾ. ಕರವೀರಪ್ರಭು ಕ್ಯಾಲಕೊಂಡ

## ಎವರ್‌ಗ್ರೀನ್ 'ಕರ್ವಾಲೋ'

ನನಗೆ ತೇಜಸ್ವಿ ಅವರ 'ಕರ್ವಾಲೋ' ಎವರ್‌ಗ್ರೀನ್ ಅನಿಸುತ್ತದೆ. ಅದರಲ್ಲಿ ಸೃಜನಶೀಲ ಚಿಂತನೆ ಇದೆ. ಅದು ತೀರಾ ಚಿಕ್ಕಮಕ್ಕಳಿಗೆ ಸರಿ ಆಗದಿರಬಹುದು. ಪ್ರೌಢಶಾಲಾ ಹಂತದ ಮಕ್ಕಳಿಗೆ ಇಷ್ಟ ಆಗುತ್ತದೆ ಎನ್ನುವುದು ನನ್ನ ಅನಿಸಿಕೆ. ಆರಂಭದಲ್ಲಿ ಅವರಿಗೆ ಸ್ವಲ್ಪ ಕಷ್ಟ ಅನ್ನಿಸಿದರೂ ಪ್ರಯತ್ನ ಮಾಡಿದರೆ ಅದು ತನ್ನೊಳಗೆ ಅವರನ್ನು ಕರೆದುಕೊಳ್ಳುತ್ತದೆ. ನಾನು ಹದಿಹರೆಯದಲ್ಲಿ ಇದ್ದಾಗ ಗೋಪಾಲಕೃಷ್ಣ ಅಡಿಗರ 'ಬನದ ಮಕ್ಕಳು' ಕೃತಿಯನ್ನು ಓದಿ ತುಂಬಾ ಖುಷಿಯನ್ನು ಅನುಭವಿಸಿದ್ದೆ. ಅಡಿಗರು ಇಂಗ್ಲಿಷ್‌ನಿಂದ ಈ ಕೃತಿಯನ್ನು ಭಾಷಾಂತರ ಮಾಡಿದ್ದರು. ಇಂತಹ ಕೃತಿ ಓದುವುದರಿಂದ ಅವರ ಕಾಲ್ಪನಿಕ ಜಗತ್ತು ವಿಸ್ತಾರ ಆಗುತ್ತದೆ. ಅಲ್ಲದೆ ಸೃಜನಶೀಲ ಚಿಂತನೆ ಮಕ್ಕಳಲ್ಲಿಯೂ ಹುಟ್ಟುತ್ತದೆ.

—ಡಾ. ಕೆ.ಬಿ. ರಂಗಸ್ವಾಮಿ